# ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಅವರ ಪ್ರಣಾಳಿಕೆಯಲ್ಲಿ ಸೇರಿಸಲು ಮಕ್ಕಳ ಹಕ್ಕೊತ್ತಾಯಗಳು

**ಸಲ್ಲಿಕೆ: ಹಗರಿಬೊಮ್ಮನಹಳ್ಳಿಯ ಭೀಮ ಸಂಘದವರು**

**ಸೌಕರ್ಯಕಾರಿಕೆ: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಸಹಕಾರದೊಂದಿಗೆ ದುಡಿಯುವ ಮಕ್ಕಳಾದ ನಾವು ಭೀಮ ಸಂಘ(ದುಡಿಯುವ ಮಕ್ಕಳ ಸಂಘಟನೆ) ಮಾಡಿಕೊಂಡಿದ್ದೇವೆ. ನಾವು ಸಂಘಗಳಲ್ಲಿ ಆಟೋಟ, ಕಲಿಕೆ, ಚರ್ಚೆ, ಮಾಹಿತಿ ಪಡೆಯುವುದು, ನಮ್ಮ ಕೌಶಲ್ಯ ಪ್ರದರ್ಶಿಸುವುದರ ಜೊತೆಗೆ, ನಮ್ಮ ವಿಷಯಗಳು, ಸಮಸ್ಯೆಗಳನ್ನೂ ಸಹ ಚರ್ಚಿಸುತ್ತೇವೆ. ನಮ್ಮ ಸಮಸ್ಯೆಗಳಿಗೆ ಎಲ್ಲಿ ಪರಿಹಾರ ಕಂಡುಕೊಳ್ಳಬಹುದು ಎಂದೂ ಸಹ ಚರ್ಚೆ ಮಾಡುತ್ತೇವೆ. ಮಕ್ಕಳ ಗ್ರಾಮ ಸಭೆ, ತಾಲೂಕು ಜಿಲ್ಲಾಡಳಿತಗಳೊಂದಿಗೆ ಮಕ್ಕಳ ಹಕ್ಕುಗಳ ಜಾರಿ ಪಡೆ ಮೂಲಕ ನಮ್ಮ ವಿಷಯಗಳನ್ನು ಅನೇಕ ಬಾರಿ ಚರ್ಚಿಸಿ ಕೆಲವು ವಿಷಯಗಳಿಗೆ ಪರಿಹಾರಗಳನ್ನು ಕಂಡುಕೊಂಡಿದ್ದೇವೆ. ನಾವು ಚರ್ಚಿಸಿದ ಕೆಲವು ವಿಷಯಗಳಿಗೆ ರಾಜ್ಯ ಮಟ್ಟದಲ್ಲಿ ಪರಿಹಾರ ಯೋಜನೆ ಮಾಡಬೇಕು. ನಮ್ಮ ರಾಜ್ಯ ಕರ್ನಾಟಕದಲ್ಲಿ ಈಗ ವಿಧಾನಸಭೆ ಚುನಾವಣೆ ಘೋಷಣೆಯಾಗಿದೆ. ಹೀಗಾಗಿ ಮುಂದೆ ನಮ್ಮ ರಾಜ್ಯ ಸರ್ಕಾರ ರಚಿಸಲು ಚುನಾವಣೆಗೆ ನಿಂತಿರುವ ನಮ್ಮ ಕ್ಷೇತ್ರದ ಅಭ್ಯರ್ಥಿಗಳೊಂದಿಗೆ ಇಂತಹ ವಿಷಯಗಳನ್ನು ಚರ್ಚಿಸುವುದು ಮುಖ್ಯ. **ಇದಕ್ಕಾಗಿ ನಮ್ಮ ಭೀಮ ಸಂಘಗಳ ಪ್ರತಿನಿಧಿಗಳಾಗಿ ವಿವಿಧ ಪಂಚಾಯತ್‌ಗಳ ಭೀಮ ಸಂಘಗಳಲ್ಲಿ ನಮ್ಮ ವಿಷಯಗಳನ್ನು ಚರ್ಚೆ ಮಾಡಿ ನಮ್ಮೆಲ್ಲ ಮಕ್ಕಳ ಪರವಾಗಿ ಈ ಕೆಳಗಿನ ನಮ್ಮ ವಿಷಯಗಳನ್ನು ನಿಮ್ಮ ಮುಂದೆ ಮಂಡಿಸುತ್ತಿದ್ದೇವೆ. ಇದನ್ನು ಎಲ್ಲ ಪಕ್ಷದ ಅಭ್ಯರ್ಥಿಗಳು ಮಕ್ಕಳ ಪ್ರಮುಖ ವಿಷಯವಾಗಿ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕು ಎಂಬುದು ನಮ್ಮ ಆಶಯ.** ಈ ಚರ್ಚೆಗೆ ನಮಗೆ ಸಹಕರಿಸಿದವರು ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ.

***ನಮ್ಮ ಹಕ್ಕೊತ್ತಾಯಗಳು:***

- ಶಾಲೆಯಿಂದ ಹೊರಗುಳಿದ ಕಿಶೋರಿಯರಿಗೆ ಸರ್ಕಾರದಿಂದ ಕೊಡುತ್ತಿದ್ದ ಪೌಷ್ಠಿಕ ಆಹಾರ ಪದಾರ್ಥಗಳು, ಕಬ್ಬಿಣ ಅಂಶದ ಮಾತ್ರೆ ಕೆಲವು ವರ್ಷಗಳ ಹಿಂದೆ ನಿಲ್ಲಿಸಿದ್ದಾರೆ. ಇದರಿಂದ ದುಡಿಯುವ ಹೆಣ್ಣು ಮಕ್ಕಳಾದ ನಮಗೆ ಪೌಷ್ಠಿಕಾಂಶದ ಕೊರತೆ ಕಾಡುತ್ತಿದೆ. ನಮಗೆ ಪುನಃ ಪೌಷ್ಠಿಕ ಆಹಾರವನ್ನು ಕೊಬೇಕು. ಅಂತೆಯೇ ಉಚಿತವಾಗಿ ನೀಡುತ್ತಿದ್ದ ಜಂತುಹುಳದ ಮಾತ್ರೆಯನ್ನೂ ನಮ್ಮಂತಹ ಎಲ್ಲ ಕಿಶೋರಿಯರಿಗೂ ನೀಡಬೇಕು.
- ಹೆಣ್ಣುಮಕ್ಕಳ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ನೀಡುತ್ತಿದ್ದ ಶುಚಿ ಸ್ಯಾನಿಟರಿ ಪ್ಯಾಡ್‌ಗಳನ್ನು ಕೆಲವು ವರ್ಷಗಳ ಹಿಂದೆ ನಿಲ್ಲಿಸಿದ್ದಾರೆ. ಉಚಿತವಾಗಿ ನೀಡುತ್ತಿದ್ದ ಸ್ಯಾನಿಟರಿ ಪ್ಯಾಡ್‌ಗಳನ್ನು ಈಗ ಹಣಕೊಟ್ಟು ಕೊಂಡುಕೊಳ್ಳಬೇಕಾಗಿದೆ. ಬಡತನವಿರುವ ನಮ್ಮಂತಹ ಮಕ್ಕಳಿಗೆ ಹಣ ಕೊಟ್ಟು ಕೊಂಡುಕೊಳ್ಳಲು ತುಂಬಾ ಕಷ್ಟ. ಹೀಗಾಗಿ ಶುಚಿ ಸ್ಯಾನಿಟರಿ ಪ್ಯಾಡ್ ಅನ್ನು ಎಲ್ಲ ಕಿಶೋರಿಯರಿಗೆ ನೀಡುವ ಯೋಜನೆಯನ್ನು ಪುನಃ ಆರಂಭಿಸಬೇಕು.
- ನಮ್ಮಲ್ಲಿ ಕೆಲವು ಮಕ್ಕಳಿಗೆ ಶಾಲಾ ಶಿಕ್ಷಣದಲ್ಲಿ ಆಸಕ್ತಿ ಇಲ್ಲದೇ ಶಾಲೆ ಬಿಟ್ಟಿದ್ದಾರೆ. ಕೆಲವರು ಮನೆಯ ಪರಿಸ್ಥಿತಿಯಿಂದಾಗಿ ಶಾಲೆಗೆ ಹೋಗಲು ಆಗದೇ ಕೆಲಸಕ್ಕೆ ಹೋಗುತ್ತಿದ್ದಾರೆ. ಕೆಲಸ ಮಾಡುತ್ತಾ ಶಿಕ್ಷಣ ಮುಂದುವರಿಸುವ ಮಕ್ಕಳಿಗೆ ಅದಕ್ಕೆ ಅನುಗುಣವಾಗಿ ವ್ಯವಸ್ಥೆ ಮಾಡಿಕೊಡಬೇಕು. ಹಾಗೂ ಸ್ವ ಉದ್ಯೋಗ ಮಾಡಲು ಅವರಿಗೆ ಅಗತ್ಯ ಸಹಕಾರಗಳನ್ನು ನೀಡಬೇಕು.
- ಶಾಲೆಬಿಟ್ಟು ಅಪಾಯಕಾರಿಯಲ್ಲದ ಕೆಲಸ ಮಾಡುತ್ತಿರುವ ಎಲ್ಲ ಮಕ್ಕಳಿಗೆ ಸರಿಯಾದ ವೇತನ ಹಾಗೂ ಇತರ ಅಗತ್ಯ ಸೌಲಭ್ಯಗಳು ಸಿಗುವಂತಾಗಬೇಕು.

**ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಅವರ ಪ್ರಣಾಳಿಕೆಯಲ್ಲಿ ಸೇರಿಸಲು ಮಕ್ಕಳ ಹಕ್ಕೊತ್ತಾಯಗಳು**

**ಸಲ್ಲಿಕೆ: ಹಗರಿಬೊಮ್ಮನಹಳ್ಳಿಯ ಭೀಮ ಸಂಘದವರು**

**ಸೌಕರ್ಯಕಾರಿಕೆ: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**

- ನಮ್ಮ ತಾಲೂಕುಗಳಲ್ಲಿ ಬಾಲ್ಯ ವಿವಾಹಗಳು ಹೆಚ್ಚು ನಡೆಯುತ್ತವೆ. ಹಾಗಾಗಿ ಶಾಲೆಗಳಲ್ಲಿ ಬಾಲ್ಯವಿವಾಹದ ಸಮಸ್ಯೆಗಳ ಬಗ್ಗೆ, ಕಾನೂನಿನ ಕ್ರಮಗಳ ಬಗ್ಗೆ ಮನಮುಟ್ಟುವಂತೆ ಮಾಹಿತಿ ನೀಡುವಂತಾಗಬೇಕು ಮತ್ತು ಎಲ್ಲ ಹಳ್ಳಿಗಳಲ್ಲೂ ಕೂಡ ಅದರ ಬಗ್ಗೆ ಹೆಚ್ಚಿನ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು.
- ಕುಡಿತದಿಂದಾಗಿ ನಮ್ಮ ಮನೆಗಳಲ್ಲಿ, ಊರು-ಕೇರಿಗಳಲ್ಲಿ ಗಲಾಟೆ, ಶೋಷಣೆ ಮುಂತಾದ ತುಂಬಾ ತೊಂದರೆಗಳಾಗುತ್ತಿವೆ. ಇದಲ್ಲದೇ ಮನೆಯಲ್ಲಿ ಕುಡಿಯುವ ದೊಡ್ಡವರಿಂದಾಗಿ ಅವರ ಆದಾಯವೆಲ್ಲ ಕುಡಿತಕ್ಕೇ ಖರ್ಚಾಗಿ ನಮ್ಮ ಬಡತನ ದಿನದಿಂದ ದಿನಕ್ಕೆ ಹೆಚ್ಚುತ್ತಲೆ ಇದೆ. ಇದಕ್ಕೆ ಮುಖ್ಯ ಕಾರಣ ಕುಡಿಯುವವರಿಗೆ ಮನೆಯ ಸಮೀಪವೇ ಗೂಡಂಗಡಿಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ ಸಿಗುವ, ದಾರಿ ಬದಿಯಲ್ಲಿ ಗುಡಿಸಲು ಹಾಕಿಕೊಂಡು ಅನಧಿಕೃತವಾಗಿ ನಡೆಯುತ್ತಿರುವ ಮದ್ಯ ಮಾರಾಟ. ಅಂತಹ ಅನಧಿಕೃತ ಮದ್ಯ ಮಾರಾಟವನ್ನು ಮೊದಲು ಎಲ್ಲಾ ಕಡೆಯೂ ನಿಲ್ಲಿಸಬೇಕು.
- ಗ್ರಾಮ ಪಂಚಾಯತ್‌ಗಳಲ್ಲಿ ನಮ್ಮಂತಹ ಎಲ್ಲಾ ಮಕ್ಕಳಿಗಾಗಿ ಗ್ರಂಥಾಲಯ ವ್ಯವಸ್ಥೆ ಆಗುತ್ತಿರುವುದು ನಮಗೆ ಸಂತೋಷ. ಈ ಗ್ರಂಥಾಲಯಗಳಲ್ಲಿ ಮಕ್ಕಳ ಓದಿಗೆ ಅನುಗುಣವಾದ ಪುಸ್ತಕಗಳು, ಪತ್ರಿಕೆಗಳು ಹೆಚ್ಚು ಇರಬೇಕು. ಡಿಜಿಟಲ್ ಗ್ರಂಥಾಲಯದ ವ್ಯವಸ್ಥೆಯೂ ಇರಬೇಕು. ನಾವು ಹೆಚ್ಚು ಹೆಚ್ಚು ಬೇರೆ ಬೇರೆ ವಿಷಯಗಳನ್ನು ಕಲಿಯಲು, ನಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಈ ಗ್ರಂಥಾಲಯಗಳ ಮೂಲಕ ಅವಕಾಶ ಮಾಡಿಕೊಡಬೇಕು. ಅದಕ್ಕೆ ಸಂಬಂಧಿಸಿದಂತೆ ಕ್ರೀಡೆ, ಸಾಂಸ್ಕೃತಿಕ ಕಲಿಕೆಯೂ ಸೇರಿದಂತೆ ಅಗತ್ಯ ಸಲಕರಣೆಗಳ ವ್ಯವಸ್ಥೆಯನ್ನು ಮಾಡಬೇಕು.
- ಗ್ರಾಮೀಣ ಗ್ರಂಥಾಲಯಗಳು ಕೆಲಸಕ್ಕೆ ಹೋಗುವ ನಮ್ಮಂತಹ ದುಡಿಯುವ ಮಕ್ಕಳ, ಸಮುದಾಯದವರ, ಎಲ್ಲ ಮಕ್ಕಳಿಗೆ ಅನುಕೂಲವಾಗುವ ಸಮಯದಲ್ಲಿ ತೆರೆದಿರುವಂತಾಗಬೇಕು.
- ನಮ್ಮ ಕೆಲವು ಹಳ್ಳಿಗಳಲ್ಲಿ ಯಾವುದೇ ಆಸ್ಪತ್ರೆಗಳಿಲ್ಲ, ಆರೋಗ್ಯ ಉಪಕೇಂದ್ರಗಳೂ ಸಹ ಇಲ್ಲ. ಹೀಗಾಗಿ ಅಂತಹ ಹಳ್ಳಿಗಳಿಗೆ ಸರ್ಕಾರಿ ಆಸ್ಪತ್ರೆ ಅಥವಾ ಉಪಕೇಂದ್ರ ಬೇಕು. ಇದರಿಂದ ತಾಲೂಕು ಆಸ್ಪತ್ರೆಗೆ ಅಥವಾ ದೂರದ ಆಸ್ಪತ್ರೆಗೆ ಹೋಗುವುದಕ್ಕಿಂತ ಹತ್ತಿರದಲ್ಲಿಯೇ ಚಿಕಿತ್ಸೆ ಸಿಗುತ್ತದೆ.
- ತಾಲೂಕಿಗೊಂದು ಗಾರ್ಮೆಂಟ್ಸ್ ಫ್ಯಾಕ್ಟರಿ ಮಾಡಬೇಕು ಇದರಿಂದ ಸುತ್ತಮುತ್ತಲಿನ ನಮ್ಮಂತಹ ದುಡಿಯುವ ಮಕ್ಕಳಿಗೆ, ಮಹಿಳೆಯರಿಗೆ ಕೆಲಸ ಸಿಗುತ್ತದೆ.
- ಉದ್ಯೋಗ ಖಾತ್ರಿಯಲ್ಲಿ ನಮ್ಮ ತಂದೆ ತಾಯಿಯರಿಗೆ ಈಗ ನೀಡುತ್ತಿರುವ 100 ದಿನಗಳು ಕಡಿಮೆಯಾಗುತ್ತದೆ. ಅದನ್ನು ಹೆಚ್ಚು ಮಾಡಬೇಕು.
- ನಮ್ಮ ಊರಿನವರು ಹೋಗುವ ಸರ್ಕಾರಿ ಶಾಲೆಗಳಲ್ಲಿ ಕಲಿಯಲು ಕಂಪ್ಯೂಟರ್ ವ್ಯವಸ್ಥೆ ಮಾಡಿಕೊಡಬೇಕು. ಹಾಗೂ ಹೆಚ್ಚಿನ ಕಂಪ್ಯೂಟರ್ ಶಿಕ್ಷಣ ಶಾಲೆಯಲ್ಲಿಯೇ ಸಿಗುವಂತಾಗಬೇಕು. ಅಲ್ಲದೇ ಈ ಕಂಪ್ಯೂಟರ್‌ಗಳಲ್ಲಿ ನಮಗೆ ಉಪಯೋಗವಾಗುವ ಡಿಜಿಟಲ್ ಪುಸ್ತಕಗಳು, ಕಲಿಕಾ ಸಾಮಗ್ರಿಗಳನ್ನು ಅಳವಡಿಸಬೇಕು. ಶಾಲೆಯಲ್ಲಿಯೇ ಕಂಪ್ಯೂಟರ್ ಶಿಕ್ಷಣ ಕೊಡುವುದರಿಂದ ರಜಾ ತಾಲೂಕು ಪ್ರದೇಶಗಳಿಗೆ ಪ್ರಯಾಣದ ವೆಚ್ಚವನ್ನು ಭರಿಸಿ, ಹೆಚ್ಚಿನ ಶುಲ್ಕ ನೀಡಿ ಕಂಪ್ಯೂಟರ್ ಕಲಿಯುವುದು ತಪ್ಪುತ್ತದೆ.

## ಕರ್ನಾಟಕ ವಿಧಾನ ಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಅವರ ಪ್ರಣಾಳಿಕೆಯಲ್ಲಿ ಸೇರಿಸಲು ಮಕ್ಕಳ ಹಕ್ಕೊತ್ತಾಯಗಳು

**ಸಲ್ಲಿಕೆ: ಹಗರಿಬೊಮ್ಮನಹಳ್ಳಿಯ ಭೀಮ ಸಂಘದವರು**

**ಸೌಕರ್ಯಕಾರಿಕೆ: ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**

- ಸರ್ಕಾರಿ ಶಾಲೆಯಲ್ಲಿ ನೀಡುವ ವಿಧ್ಯಾರ್ಥಿ ವೇತನವು ಸರಿಯಾದ ಸಮಯಕ್ಕೆ ಸಿಗದೇ ಶೈಕ್ಷಣಿಕ ವರ್ಷ ಮುಗಿಯುವ ಸಮಯದಲ್ಲಿ ಬರುತ್ತದೆ. ಇದರಿಂದ ಎಲ್ಲಾ ಮಕ್ಕಳಿಗೂ ಕಲಿಕೆಗೆ ತೊಂದರೆಯಾಗುತ್ತದೆ. ಇದನ್ನು ಶಾಲಾ ಆರಂಭದ ಸಮಯದಲ್ಲಿಯೇ ಸಿಗುವಂತಾಗಬೇಕು.
- ನಮ್ಮ ಎರಡೂ ತಾಲೂಕಿನಲ್ಲಿ ವಿದ್ಯಾಭ್ಯಾಸ ಮುಗಿಸಿದವರು ಹಲವಾರು ಜನರಿದ್ದಾರೆ. ಅವರ ನಿರುದ್ಯೋಗದ ಸಮಸ್ಯೆಯನ್ನು ಹೋಗಲಾಡಿಸಲು ಕ್ರಮಗಳನ್ನು ಕೈಗೊಳ್ಳಬೇಕು.
- ನಮ್ಮ ಊರಿನಲ್ಲಿ ವಿದ್ಯಾಭ್ಯಾಸ ಪಡೆದು ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಇಚ್ಛೆ ಇರುವವರು ಕೋಚಿಂಗ್ ಪಡೆಯಲು ಬೇರೆ ಬೇರೆ ಜಿಲ್ಲೆಗಳಿಗೆ ಹೋಗಬೇಕಾಗುತ್ತದೆ. ಜೊತೆಗೆ ಹಣಕಾಸಿನ ತೊಂದರೆ ಕೂಡ ಎದುರಾಗುತ್ತದೆ. ಹಾಗಾಗಿ ಪ್ರತಿ ತಾಲೂಕಿನಲ್ಲೂ ಉಚಿತ ಕೋಚಿಂಗ್ ಸೆಂಟರ್ ತೆರೆಯಬೇಕು.
- ಕೆಲವು ಶಾಲೆಗಳಲ್ಲಿ ನೀಡುವ ಆಹಾರವು ಕಳಪೆ ಗುಣಮಟ್ಟದಾಗಿರುತ್ತದೆ. ನಮ್ಮ ಎಲ್ಲಾ ಊರುಗಳಲ್ಲಿಯೂ ಇರುವ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಆಹಾರವು ಉತ್ತಮ ಗುಣಮಟ್ಟದ್ದು ಹಾಗೂ ಪೌಷ್ಠಿಕಾಂಶ ಭರಿತವಾಗಿರಬೇಕು.
- ನಮ್ಮ ತಮ್ಮ-ತಂಗಿಯರು ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಅವರಿಗೆ ಕೆಲವು ವೃತ್ತಿಪರ ಶಿಕ್ಷಣದ ಬಗ್ಗೆ ಮಾಹಿತಿ ಹಾಗೂ ತರಬೇತಿಯನ್ನು ನೀಡಬೇಕು.
- ನಮ್ಮ ಹಲವಾರು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿಲ್ಲ. ಕೆಲವು ಕಡೆ ಇದ್ದರೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಲ್ಲಾ ಹಳ್ಳಿಗಳಿಗೂ ಶುದ್ಧ ಕುಡಿಯುವ ನೀರಿನ ಘಟಕಗಳ ವ್ಯವಸ್ಥೆಯನ್ನು ಮಾಡಬೇಕು.
- ಸೊನ್ನ ಪಂಚಾಯತ್ ವ್ಯಾಪ್ತಿಯ ಉಲವತ್ತಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇದೆ. ಆದರೆ ಅದರ ವೈದ್ಯರು ಯಾವುದೇ ಖಾಯಿಲೆ ಬಂದರೂ ಚಿಕಿತ್ಸೆಗೆ ಹೋದರೆ ಸರಿಯಾಗಿ ತಪಾಸಣೆ ಮಾಡುವುದಿಲ್ಲ, ಔಷಧಿಗಳನ್ನು ಕೊಡುವುದಿಲ್ಲ. ತಕ್ಷಣದಿಂದಲೇ ಸರಿಯಾದ ವೈದ್ಯರು ನೇಮಕವಾಗಬೇಕು
- ನೆಲ್ಲುಕುದುರೆ ಗ್ರಾಮದಲ್ಲಿ ಕೇವಲ ೮ನೇ ತರಗತಿಯವರೆಗೆ ಮಾತ್ರ ಸರ್ಕಾರಿ ಶಾಲೆ ಇದೆ. ಕನಿಷ್ಟ ೧೦ನೇ ತರಗತಿಯವರೆಗೆ ಸರ್ಕಾರಿ ಶಾಲೆ ಇದ್ದರೆ, ನಮ್ಮ ಊರಿನ ಹೆಣ್ಣು ಮಕ್ಕಳಿಗೆ ಕಲಿಯಲು ಸಹಾಯವಾಗುತ್ತದೆ. ನಮ್ಮಂತಹ ದುಡಿಯುವ ಎಷ್ಟೋ ಹೆಣ್ಣು ಮಕ್ಕಳಿಗೆ ನಮ್ಮ ತಂದೆ-ತಾಯಿಯರು ಬೇರೆ ಊರಿಗೆ ಬಸ್-ರಿಕ್ಷಾ ಮೂಲಕ ಶಾಲೆಗೆ ಕಳುಹಿಸಬೇಕೆಂಬ ಕಾರಣಕ್ಕಾಗಿಯೇ ಶಾಲೆ ಬಿಡಿಸಿದ್ದಾರೆ.
- ನೆಲ್ಲುಕುದುರೆ ಗ್ರಾಮ ಪಂಚಾಯತ್ ಕಛೇರಿ ಪ್ರಮುಖ ರಸ್ತೆಯ ಪಕ್ಕ ಸ್ಥಳಾಂತರಗೊಂಡಿದೆ. ನೆಲ್ಲುಕುದರೆ ಪಂಚಾಯತ್ ವ್ಯಾಪ್ತಿಯ ಕೆಲವು ಗ್ರಾಮದ ಜನರು ಪಂಚಾಯತ್‌ಗೆ ಹೋಗಬೇಕೆಂದರೆ ತಾಲೂಕು ಕೆಂದ್ರಕ್ಕೆ ಹೋಗಿ, ಪುನಃ ಅಲ್ಲಿಂದ ಗ್ರಾಮ ಪಂಚಾಯತ್ ಕಛೇರಿಗೆ ಹೋಗಬೇಕು. ಮಧ್ಯೆ ಒಂದು ಸೇತುವೆ ಆದರೆ ಅಷ್ಟು ದೂರ ಸುತ್ತು ಹೊಡೆದು ಪ್ರಯಾಣಿಸುವ ಅಗತ್ಯವಿರುವುದಿಲ್ಲ.

ದುಡಿಯುವ ಮಕ್ಕಳ ಸಂಘವಾದ ಭೀಮಸಂಘದ ಪರವಾಗಿ